# ಸಿನಿ ಸಂಪದ

**ಹದಿನಾರನೇ ವಯಸ್ಸಿಗೆ ಕಿರುತೆರೆಯಲ್ಲಿ ಕಾಣಿಸಿಕೊಂಡಿದ್ದ ನಟಿ ಸಂಪದ, 'ರೈಡರ್', 'ಬೆಂಕಿ' ಸಿನಿಮಾಗಳ ಮೂಲಕ ಚಿತ್ರರಂಗದ ಅನುಭವ ಪಡೆದಿದ್ದರು. ಇದೀಗ ನಟ ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ' ಸಿನಿಮಾದಲ್ಲಿ ಪಶುವೈದ್ಯೆಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.**

**■ ಸುಮಲತಾ ಎನ್.**

'ನಮ್ಮ ಕುಟುಂಬದಲ್ಲಿ ಏನೇ ವಿಶೇಷ ಸಂದರ್ಭ ಇರಲಿ, ಸಿನಿಮಾಗೆ ಹೋಗುತ್ತಿದ್ದೆವು. ಒಳ್ಳೆಯ ಸಿನಿಮಾ ಬಂದರೆ, ಕುಟುಂಬದಲ್ಲಿ ಯಾರದ್ದಾದರೂ ಹುಟ್ಟಿದ ಹಬ್ಬ ಇದ್ದರೆ, ರಜೆ ಇದ್ದರೆ, ವೀಕೆಂಡ್ ಇದ್ದರೆ – ಹೀಗೆ ಸಮಯ ಸಿಕ್ಕಾಗೆಲ್ಲಾ ಸಿನಿಮಾ ನೋಡುವುದು... ಚಿಕ್ಕವಯಸ್ಸಿನಿಂದಲೇ ಬಂದ ಸಿನಿಮಾ ಗೀಳು ನನ್ನನ್ನು ನಟನೆಗೆ ಬರುವಂತೆ ಮಾಡಿರಬೇಕು...'

ನಟನೆಯತ್ತ ತಮ್ಮನ್ನು ಕರೆತಂದ ಕಾರಣವನ್ನು ಹೀಗೆ ಹೇಳಿ ನಕ್ಕರು ಸಂಪದ.

ಅಪ್ಪನ ಊರು ಮಂಡ್ಯ. ಅಮ್ಮನದು ದೊಡ್ಡಬಳ್ಳಾಪುರ. ಸಂಪದ ಓದಿ, ಬೆಳೆದದ್ದೆಲ್ಲ ಬೆಂಗಳೂರಿನಲ್ಲೇ. ಇಂಟೀರಿಯರ್ ಡಿಸೈನಿಂಗ್ ಪದವಿಯನ್ನು ಕಳೆದ ವರ್ಷವಷ್ಟೆ ಪಡೆದಿದ್ದಾರೆ. ಇದೇ ಕಾರಣಕ್ಕೆ ಈಗ ಚಿತ್ರರಂಗದತ್ತ ಚಿತ್ತ ನೆಟ್ಟಿದ್ದಾರೆ.

ಸುಮಾರು 15 ವರ್ಷವಿದ್ದಾಗಲೇ ನಟನೆಯೆಡೆಗೆ ಆಸಕ್ತಿ ಬೆಳೆಸಿಕೊಂಡ ಸಂಪದ, ಆಗ ಮೂರು ತಿಂಗಳ ಅವಧಿಯ ಅಭಿನಯದ ತರಬೇತಿ ಪಡೆದಿದ್ದರು. ಓದುವ ಸಮಯದಲ್ಲೇ ಆಡಿಷನ್ ನೀಡಿ ಕಿರುತೆರೆಗೂ ಕಾಲಿಟ್ಟರು. 'ಮಿಥುನರಾಶಿ' ಧಾರಾವಾಹಿಯಲ್ಲಿ ಮೊದಲ ಬಾರಿ ಕ್ಯಾಮೆರಾ ಎದುರಿಸಿದರು.

'ಧಾರಾವಾಹಿಯಿಂದ ನಟನೆ ಕುರಿತು ಹಲವು ವಿಷಯಗಳನ್ನು ಕಲಿತೆ. ಧಾರಾವಾಹಿ ಶಾಲೆಯಂತೆ. ಕ್ಯಾಮೆರಾ ಮುಂದೆ ಕಂಫರ್ಟಬಲ್ ಆಗಿರುವುದು ಅಲ್ಲಿಂದಲೇ ಕಲಿತ ವಿದ್ಯೆ. ಎಷ್ಟೋಂದು ಜನ ಗುರುತಿಸಿದ್ದು ನೋಡಿ ನನಗೆ ಖುಷಿಯಾಗಿತ್ತು' ಎಂದು ಧಾರಾವಾಹಿ ದಿನಗಳನ್ನು ಮೆಲುಕು ಹಾಕಿದರು.

ಕಿರುತೆರೆ ನಂತರ 'ರೈಡರ್' ಸಿನಿಮಾದಲ್ಲಿ ಪಾತ್ರವೊಂದನ್ನು ನಿಭಾಯಿಸಿದ ಅವರು, ಮುಂದೆ ಅನೀಶ್ ತೇಜೇಶ್ವರ್ ನಟನೆಯ 'ಬೆಂಕಿ'

